# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್ ಸಿ ರವರ ನ್ಯಾಯಾಲಯ, ಮಳವಳ್ಳಿ

# ಸಿಸಿ ನಂಃ 261/2025

**ಪಿರ್ಯಾದಿ** : ಶ್ರೀ ಪುಟ್ಟಸ್ವಾಮಿ
ಬಿನ್ ಲೇಟ್ ಅಂಕೇಗೌಡ @ ಬಿಳಿಗೌಡ
ವಯಸ್ಸು 47 ವರುಷ,
ವಾಸ ಃ ನೆಲ್ಲೂರು ಗ್ರಾಮ, ಕಸಬಾ ಹೋಬಳಿ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

- ವಿರುದ್ಧ -

**ಆರೋಪಿ** : ಶ್ರೀ ಡಿ.ಕೆ. ಮಹೇಶ್ @ ಗೂಳಿ ಮಹೇಶ್
ಬಿನ್ ಕರಿಯಪ್ಪ
ವಯಸ್ಸು: 40 ವರ್ಷ
ವಾಸ - ದೊಡ್ಡಅರಸಿನಕೆರೆ ಗ್ರಾಮ, ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

**ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಆರೋಪಿಯ ಹೇಳಿಕೆ.**

1) ಅಭಿಯೋಜನೆ ಪರ ಹೇಳಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ

2) ಪ್ರಾಸಾ-1 ಶ್ರೀ ಪುಟ್ಟಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಆರೋಪಿಯಾದ ನೀವು ಅವರಿಗೆ ಪರಿಚಯಸ್ಥರಾಗಿದ್ದು, ಅದ್ದರಿಂದ ನೀವು ಅವರಿಂದ 2 ಲಕ್ಷದ 50 ಸಾವಿರ ರೂಪಾಯಿಗಳನ್ನು ದಿನಾಂಕ 07.11.2013 ರಂದು ನಿಮ್ಮ ಅಗತ್ಯಕ್ಕಾಗಿ ಅಂದರೆ ಕೈಸಾಲಗಳನ್ನು ತೀರಿಸಲು ಮತ್ತು ಮನೆ ಕಟ್ಟಿಸಲು ಪಡೆದಿರುತ್ತೀರಿ. ಮುಂದುವರೆದು ಆರೋಪಿಯಾದ ನೀವು ಸದರಿ ಸಾಲದ ಮೊತ್ತವನ್ನು 02 ತಿಂಗಳ ಒಳಗಾಗಿ ಹಿಂದುರುಗಿಸುವುದಾಗಿ ಭರವಸೆ ನೀಡಿರುತ್ತೀರಿ. ಅದೇ ದಿನ ಆರೋಪಿಯಾದ ನೀವು ತನಗೆ 612900 ನಂಬರಿನ ಡೈರಿ ಬ್ರಾಂಚ್, ಗೆಜ್ಜಲಗೆರೆ ಗ್ರಾಮದ ಎನ್.ಡಿ.ಸಿ.ಸಿ. ಬ್ಯಾಂಕಿನ ಚೆಕ್ಕನ್ನು ಅವರಿಗೆ ನೀಡಿ ಅದನ್ನು ಬ್ಯಾಂಕಿಗೆ ಹಾಜರುಪಡಿಸಿ ಹಣ ಪಡೆಯುವಂತೆ

ಹೇಳಿರುತ್ತೀರಿ, ನಂತರ ಪಿರ್ಯಾದುದಾರರು ಆರೋಪಿಯಾದ ನಿಮ್ಮನ್ನು ಭೇಟಿ ಮಾಡಿ ಸಾಲದ ಮೊತ್ತವನ್ನು ಹಿಂದುರುಗಿಸುವಂತೆ ಕೇಳಿದಾಗ ಅರೋಪಿಯಾದ ನೀವು ಚೆಕ್ಕನ್ನು ಹಾಜರುಪಡಿಸುವಂತೆ ತಿಳಿಸಿರುತ್ತೀರಾ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನೂ ಹೇಳುವಿರಿ ?

**ಉತ್ತರಃ**

3) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಅವರು ನೀವು ನೀಡಿದ ಚೆಕ್ಕನ್ನು ತಳಗವಾದಿ ಬ್ರಾಂಚ್‌ನ ಕೆನರಾ ಬ್ಯಾಂಕಿಗೆ ಹಾಜರುಪಡಿಸಿದಾಗ, ಅರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ದಿನಾಂಕ 20.01.2014 ರಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ದಿನಾಂಕ 25.01.2014 ರಂದು ಅವರು ಆರೋಪಿಯಾದ ನಿಮಗೆ ತಿಳುವಳಿಕೆ ನೋಟೀಸನ್ನು ಕಳುಹಿಸಿದ್ದು, ಅದನ್ನು ನೀವು ಸ್ವೀಕರಿಸಿರುತ್ತೀರಿ. ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಗೊತ್ತಿದ್ದರೂ ಸಹ ಅವರಿಗೆ ಚೆಕ್ಕನ್ನು ನೀಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನೂ ಹೇಳುವಿರಿ ?

**ಉತ್ತರಃ**

**4**) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಮಾಡಿಸುವಿರಾ?

ಉತ್ತರಃ

5) ನೀವು ನ್ಯಾಯಾಲಯಕ್ಕೆ ಹೆಚ್ಚುವರಿಯಾಗಿ ಏನಾದರೂ ಹೇಳುವುದು ಇದೆಯೇ?

ಉತ್ತರಃ

(ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಆರೋಪಿ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ.)

ದಿನಾಂಕ 23.12.2025.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.